ಮನೆಯೊಳಕ್ಕೆ ಬರದೆ ಹೊರಗೆ ಬಾಗಿಲಲ್ಲಿ ಒದ್ದೆ ಪಂಚೆಯಲ್ಲಿ ನಿಂತಿರ್ತಾರೆ! ಇರೋಕೆ ನಂಗೆ ಮನೆ ಇಲ್ಲ...' ಅಂತಾರೆ. ಬಾಳೆಬೈಲಲ್ಲಿರೋ ನಮ್ಮ ಮನೆ ಹಳತಾಗಿದೆ. ಅದು ಯಾವಾಗ ಬೀಳುತ್ತೋ ಗೊತ್ತಿಲ್ಲ. ಅಪ್ಪಯ್ಯನ ಆತ್ಮ ಇನ್ನೂ ಬಾಳೆಬೈಲಿನ ನಮ್ಮ ಮನೆ ಸುತ್ತ ಅಲೀತಿದೆ ಅಂತ ನಂಗೆ ಅನ್ನಿಸೋಕೆ ಶುರುವಾಗಿದೆ. ಹಳೇ ಮನೆ ಕೆಡವಿ ಹೊಸದನ್ನು ಕಟ್ಟಬೇಕು ಅಂತ ತೀರ್ಮಾನ ಮಾಡಿದ್ದೀನಿ. ಅರವತ್ತು ಲಕ್ಷದ ಪ್ಲಾನು ರೆಡಿ ಇದೆ. ಹೊಸಮನೆ ಕಟ್ಟದ ಮೇಲಾದರೂ ಅಪ್ಪಯ್ಯ ಕನಸಿನಲ್ಲಿ ಬರೋದು ನಿಲ್ಲಬಹುದು. ಮತ್ತೆ ಮತ್ತೆ ಬೀಳೋ ಒಂದೇ ರೀತಿಯ ಕನಸುಗಳು. ಮನೆಯ ಹೊರಗೇ ನಿಂತಿರೋ ಅಪ್ಪಯ್ಯನ ದೈನ್ಯ ಮುಖ ಕನಸಿನಲ್ಲಿ ಕಂಡ ಕೂಡಲೇ ಎಚ್ಚರವಾಗಿ ಬಿಡುತ್ತೆ. ಮತ್ತೆ ನಿದ್ದೆ ಬರೋದಿಲ್ಲ. ಅಮ್ಮ ಒಂದು ದಿನವೂ ಕನಸಿನಲ್ಲಿ ಬಂದಿಲ್ಲ...' ನನ್ನೊಳಗೆ ಹತ್ತಾರು ಪ್ರಶ್ನೆಗಳಿವೆ. ಅವಕ್ಕೆ ಉತ್ತರ ಹುಡುಕುವ ಪ್ರಯತ್ನ ಮಾಡ್ತ ಇದ್ದೀನಿ ಎಂದು ಹೇಳುತ್ತಿರುವಾಗ ಸತ್ಯನಿಗೆ ಅಳು ಬಂತು. ಸ್ವಲ್ಪ ಹೊತ್ತು ಸಣ್ಣ ಮಕ್ಕಳಂತೆ ಅತ್ತು ಸುಮ್ಮನಾದ.

ಅಣ್ಣನ ಮಕ್ಕಳ ಅಕಾಲ ಸಾವು ನನ್ನನ್ನೂ ಸುಸ್ತು ಮಾಡಿದೆ ವಿಶ್ವ. ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದರೂ ನಾನು ಮಾನಸಿಕವಾಗಿ ಸೋತಿದ್ದೀನಿ. ನಮ್ಮ ಹಿರಿಯರನ್ನು ಮರೆತಿದ್ದೀನಿ. ಒಬ್ಬನೇ ಆದರೂ ಸರಿ ಬಾಳೆಬೈಲಿಗೆ ಬಂದು ಇರಬೇಕು ಅಂತ ಕೆಲವು ಸಲ ಅನ್ನಸ್ತೆ. ಆದರೆ ಅಂತಹ ಯೋಚನೆ, ಮನಸ್ಥಿತಿ ಬಹಳ ಕಾಲ ಉಳಿಯಲ್ಲ. ಇಷ್ಟು ವರ್ಷ ಎಲ್ಲೋ ಇದ್ದೆ. ಈ ಕೊನೆಗಾಲದಲ್ಲಿ ಊರಿಗೆ ಬಂದು ಅಪ್ಪಯ್ಯ, ಅಮ್ಮ ಇಲ್ಲದ ಮನೆಯಲ್ಲಿ ಒಬ್ಬನೇ ಹೇಗಿರೋದು ಅನ್ನಿಸಿದಾಗ ಭಯವಾಗುತ್ತೆ ಎಂದ. ಇವತ್ತಿಗೆ ಇಷ್ಟು ಸಾಕು. ನಿಂಗೆ ಹೇಳೋಕೆ ಅನೇಕ ವಿಷಯಗಳಿವೆ. ನಿಧಾನವಾಗಿ ಮಾತಾಡೋಣ ನಂಗೆ ನಿದ್ದೆ ಬರ್ತಿದೆ ಎಂದು ಹೇಳಿ ಊಟವನ್ನೂ ಮಾಡದೆ ಮಲಗಿದ.

*

ಉಡುಪಿಯಿಂದ ಹೊರಟಾಗ ಹನ್ನೆರಡಾಗಿತ್ತು. ಹತ್ತದಿನ್ನೈದು ಕಿಲೋಮೀಟರು ದೂರದಲ್ಲಿ ತೆಂಕಬೆಟ್ಟು ಅನ್ನೋ ಊರು ಇದೆಯಂತೆ.ಅಲ್ಲಿಂದ ಮುಂದೆ ಎಲ್ಲೋ ನರಸಿಂಹದೇವರ ಪೀಠ ಇದೆಯಂತೆ. ಯಾರನ್ನು ಕೇಳಿದರೂ ತೋರಿಸ್ತಾರೆ ಎಂದು ಕೊಪ್ಪದಿಂದ ಹೊರಡುವಾಗ ಅಣ್ಣ ಹೇಳಿದ್ದು ಚಿದಂಬರನಿಗೆ ನೆನಪಾಯಿತು. ಜಿಪಿಎಸ್ ಹಾಕಿಕೊಂಡು ತೆಂಕಬೆಟ್ಟಿಗೆ ಕಾರು ಓಡಿಸಿದ. ದಾರಿಯುದ್ದಕ್ಕೂ ಅನೇಕರನ್ನು ವಿಚಾರಿಸಿದರು. ಸಾತ್ವಿಕ ನರಸಿಂಹ ದೇವರ ಪೀಠದ ಹೆಸರನ್ನು ನಾವು ಕೇಳ್ತಿರೋದು ಇದೇ ಮೊದಲು ಎಂದು ಎಲ್ಲರೂ ಹೇಳಿದರು. ತೆಂಕಬೆಟ್ಟಿನ ಜನರೂ ಅದನ್ನೇ ಹೇಳಿದರು.

ನೀವು ಉಡುಪಿಗೆ ಹೋಗಿ ತಾಲ್ಲೂಕಾಫೀಸಲ್ಲಿ ವಿಚಾರಿಸಿ. ಮಾಹಿತಿ ಸಿಗಬಹುದು ಎಂದು ಒಬ್ಬ ಹೇಳಿದ. ಕುಲದೇವರ ದೇವರನ್ನು ಹುಡುಕ್ತಿದ್ದೀವಿ ಅನ್ನೋದೆ ಈ ಜನರಿಗೆ ತಮಾಷೆಯಂತೆ ಕಾಣ್ತಿರಬಹುದು ಎಂದು ಸತ್ಯನಿಗೆ ಅನ್ನಿಸಿತು. ಬರುವಾಗ ರಸ್ತೆ ಪಕ್ಕದಲ್ಲಿ ನಾಗಬನಕ್ಕೆ ದಾರಿ ಎಂಬ ಬೋರ್ಡು ಕಾಣಿಸಿತು! ನೇರ ನಾಗಬನಕ್ಕೆ ಹೋದರು. ದಾರಿಯಲ್ಲಿ ಕಂಡವರ ಜತೆ ಮಾತಾಡಿದರು. ಯಾರಿಗೂ ಸಾತ್ವಿಕ ನರಚಿಂಹಸ್ವಾಮಿ ಗೊತ್ತೇ ಇಲ್ಲ! ನಾಗಬನದ ಹತ್ತಿರ ಸಿಕ್ಕ ಹಿರಿಯರೊಬ್ಬರು, ನನಗೀಗ ಎಂಬತ್ತೆಂಟು ವರ್ಷ. ನರಸಿಂಹ ದೇವರ ಪೀಠ ಕೇಳಿಕೊಂಡು ಯಾರೂ ಬಂದ ನೆನಪಿಲ್ಲ. ನೀವು ಉಡುಪಿಗೆ ಹೋಗಿ ಚಂದ್ರಮೌಳೇಶ್ವರ ದೇವಸ್ಥಾನ ಹತ್ತಿರ ಒಂದು ಪೂಜಾ ಸಾಮಗ್ರಿಗಳು, ಜನಿವಾರ ಮಾರುವ ಅಂಗಡಿ ಇದೆ. ಅಲ್ಲೇ ಎಲ್ಲೋ ಕೃಷ್ಣಪ್ಪಯ್ಯ ಅನ್ನೋರ ಮನೆ ಇದೆ. ಅವರಿಗೆ ಈಗ ನೂರಾಮೂರು ವರ್ಷ. ನಂಗೊತ್ತಿರೋ ಹಾಗೆ, ಅವರಿಗಿಂತ ಹಿರಿಯರು ಉಡುಪಿಯಲ್ಲೇ ಇಲ್ಲ. ಅವರನ್ನು ಕೇಳಿ ನೋಡಿ. ನಿಮ್ಮ ಕುಲದೇವರ ಬಗ್ಗೆ ಏನಾದರೂ ಗೊತ್ತಾಗಬಹುದು...' ಎಂದರು.

ಉಡುಪಿಗೆ ಬರುವಷ್ಟರಲ್ಲಿ ಸಂಜೆಯಾಗಿತ್ತು. ನೇರ ಚಂದ್ರಮೌಳೇಶ್ವರ ದೇವಸ್ಥಾನ ಹುಡುಕಿಕೊಂಡು ಹೋದರು. ಸತ್ಯ,ವಿಶ್ವ ಇಬ್ಬರೂ ಕೃಷ್ಣಪ್ಪಯ್ಯವನರ ಮನೆ ಎಲ್ಲಿದೆ ಎಂದು ವಿಚಾರಿಸತೊಡಗಿದರು. ಪಿತೃಪೂಜೆ ಸಮಯದಲ್ಲಿ ಬೇಕಾಗಬಹುದೆಂದು ಇನ್ನೂರೈವತ್ತು ಜನಿವಾರದ ಜೋಡಿಗಳು, ಪಂಚಪಾತ್ರೆ, ಕಲಶದ ಚೊಂಬುಗಳು, ಉದ್ಧರಣೆಗಳನ್ನು ಚಿದಂಬರ ಅಲ್ಲಿದ್ದ ಅಂಗಡಿಯಲ್ಲಿ ಖರೀದಿ ಮಾಡಿ ಕಾರಲ್ಲಿಟ್ಟು ಬಂದ. ಅಷ್ಟರಲ್ಲಿ ಕತ್ತಲಾಗಿತ್ತು.

'ಅಜ್ಜಯ್ಯ ಸಂಧ್ಯಾವಂದನೆಗೆ ಕೂತಿದ್ದಾರೆ. ನೀವು ಸ್ವಲ್ಪ ಹೊತ್ತು ಕಾಯಿರಿ. ಕುಡಿಯಲು ನೀರು ಬೇಕಾ...'ಎಂದು